# ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ
## ಮೈಸೂರು



# 2010-11ನೇ ಸಾಲಿನ ಪರಿಷ್ಕೃತ ಆದಾಯ-ವೆಚ್ಚ
ಮತ್ತು
# 2011-12ನೇ ಸಾಲಿನ ಅಂದಾಜು ಆದಾಯ-ವೆಚ್ಚ



ಐತಿಹಾಸಿಕವಾಗಿ, ಸಾಂಸ್ಕೃತಿಕವಾಗಿ, ಶೈಕ್ಷಣಿಕವಾಗಿ ಪ್ರಸಿದ್ಧಿಯನ್ನು ಪಡೆದ, ಜಗತ್ಪ್ರಸಿದ್ಧ ಪ್ರವಾಸಿ ಕೇಂದ್ರವಾಗಿರುವ, ಆಗಿನ ರಾಜಮಹಾರಾಜರ, ಒಡೆಯರ್‌ರ ಆಳ್ವಿಕೆಗೆ ಒಳಪಟ್ಟಿದ್ದ ಮೈಸೂರು ನಗರದಲ್ಲಿ ನಗರಾಭಿವೃದ್ಧಿ ವಿಶ್ವಸ್ಥ ಮಂಡಳಿಯನ್ನು ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು 1903ರಲ್ಲಿ ಸಂಸ್ಥಾಪಿಸಿದ್ದು, ರಾಷ್ಟ್ರದಲ್ಲೇ ಪ್ರಥಮ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುತ್ತದೆ. ಈಗ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು ರಾಜ್ಯದ ಇತರೇ ನಗರಾಭಿವೃದ್ಧಿ ಪ್ರಾಧಿಕಾರಗಳ ಪೈಕಿ ಅತೀ ದೊಡ್ಡ ಪ್ರಾಧಿಕಾರವಾಗಿರುತ್ತದೆ.

ಈ ಪ್ರಾಧಿಕಾರದ ಗೌರವಾನ್ವಿತ ಅಧ್ಯಕ್ಷರೇ, ಹಾಗೂ ಗೌರವಾನ್ವಿತ ಸದಸ್ಯರುಗಳೇ, ಅಧಿಕಾರಿ ವರ್ಗದವರೇ ಹಾಗೂ ಮಾಧ್ಯಮ ಪ್ರತಿನಿಧಿಗಳೇ,

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ 2010–11ನೇ ಸಾಲಿನ ಪರಿಷ್ಕೃತ ಆದಾಯ–ವೆಚ್ಚ ಹಾಗೂ 2011–12ನೇ ಸಾಲಿನ ಅಂದಾಜು ಆದಾಯ–ವೆಚ್ಚ ಪತ್ರವನ್ನು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ 1987ರ ಕಲಂ 43ರಡಿ ಮಂಡಿಸುತ್ತಿದ್ದೇನೆ.

## 2010–11ನೇ ಸಾಲಿನ ಪರಿಷ್ಕೃತ ಆದಾಯ ಮತ್ತು ವೆಚ್ಚದ ವಿವರ

2010–11ನೇ ಸಾಲಿನ ಆದಾಯಕ್ಕೆ ಸಂಬಂಧಿಸಿದಂತೆ, ಹುಡ್ಕೊ ಫಲಾನುಭವಿಗಳಿಂದ ಕಂತಿನ ಬಾಕಿ ಪಾವತಿ, ಹೊಸಬಡಾವಣೆಗಳ ನಿವೇಶನ ಹಂಚಿಕೆಯಿಂದ, ನಿವೇಶನಗಳ ಹರಾಜಿನಿಂದ, ವಾಣಿಜ್ಯ ಸಂಕೀರ್ಣ ಹರಾಜು ಮತ್ತು ಹಂಚಿಕೆಯಿಂದ, ನಾಗರೀಕ ಸೌಕರ್ಯ ನಿವೇಶನಗಳಿಂದ, ಅಭಿವೃದ್ಧಿ ಹಾಗೂ ಬೆಳವಣಿಗೆ ಶುಲ್ಕ, ಕಲ್ಯಾಣ ಮಂಟಪಗಳ ಬಾಡಿಗೆ, ನಿವೇಶನಗಳ ಮೇಲಿನ ಕಂದಾಯ, ನಿಶ್ಚಿತ ಠೇವಣಿಗಳ ಮೇಲಿನ ಬಡ್ಡಿ ಹಾಗೂ ಇತರೆ ಆದಾಯ ಮೂಲಗಳಿಂದ ಪ್ರಾಧಿಕಾರವು ರೂ.39019.86 ಲಕ್ಷಗಳ ಆದಾಯವನ್ನು ನಿರೀಕ್ಷೆ ಮಾಡಲಾಗಿತ್ತು. ಆದರೆ ಏಪ್ರಿಲ್ 2010ರ

ಮಾಹೆಯಿಂದ ಡಿಸೆಂಬರ್ 2010ರ ಅಂತ್ಯಕ್ಕೆ ವಾಸ್ತವಿಕ ಆದಾಯ ರೂ. 12075.58 ಲಕ್ಷಗಳು ಸ್ವೀಕೃತಿಯಾಗಿದ್ದು ಜನವರಿ 2011 ರಿಂದ ಮಾರ್ಚ್ 2011ರ ಅಂತ್ಯದ ವರೆಗೆ ರೂ. 3951.90ಲಕ್ಷಗಳನ್ನು ನಿರೀಕ್ಷಿಸಿ 2010-11ನೇ ಸಾಲಿಗೆ ಒಟ್ಟಾರೆ ರೂ.16027.48 ಲಕ್ಷಗಳಿಗೆ ಅಂದಾಜನ್ನು ಪರಿಷ್ಕರಿಸಲಾಗಿದೆ.

2010-11ನೇ ಸಾಲಿನಲ್ಲಿ ವೆಚ್ಚಕ್ಕೆ ಸಂಬಂಧಿಸಿದಂತೆ, ಸಮಗ್ರ ನಗರಾಭಿವೃದ್ಧಿ ಕಾಮಗಾರಿಗಳು, ಹೊಸ ಬಡಾವಣೆ ನಿರ್ಮಾಣ ಮತ್ತು ಅಭಿವೃದ್ಧಿ, ಉದ್ಯಾನವನ ಅಭಿವೃದ್ಧಿ ಮತ್ತು ತೋಟಗಾರಿಕೆ, ಮಕ್ಕಳ ಆಟದ ಉದ್ಯಾನವನ, ಪ್ರಾಧಿಕಾರದ ಆಸ್ತಿ ಸೃಷ್ಠಿ ಹಾಗೂ ನಾಗರಿಕ ಸೌಲಭ್ಯ, ಮಿನಿ ಮಾರುಕಟ್ಟೆ ನಿರ್ಮಾಣ, ಕೆರೆಗಳ ಅಭಿವೃದ್ಧಿ, ಪ್ರಾಧಿಕಾರದ ಬಡಾವಣೆಗಳಿಗೆ ಹೊಂದಿಕೊಂಡಂತೆ ಇರುವ ಗ್ರಾಮಗಳಿಗೆ ಒಳಚರಂಡಿ ವ್ಯವಸ್ಥೆ, ಮೂಲಭೂತ ಸೌಕರ್ಯ ಒದಗಿಸುವ ಕಾಮಗಾರಿ, ಹೊರವರ್ತುಲ ರಸ್ತೆ, ನೀರು ಸರಬರಾಜು ಯೋಜನೆ ಇತರೆ ವಿಶೇಷ ಅಭಿವೃದ್ಧಿ ಕಾಮಗಾರಿಗಳೊಂದಿಗೆ, ಭೂ ಸ್ವಾದೀನ ವೆಚ್ಚ, ಸಾಲ ಹಾಗೂ ಮುಂಗಡ, ಆಡಳಿತ ಮತ್ತು ಸಿಬ್ಬಂದಿ ವೆಚ್ಚ ಸೇರಿ ಒಟ್ಟು ರೂ.38940.70 ಲಕ್ಷಗಳ ಅನುದಾನ ಕಾಯ್ದಿರಿಸಿದ್ದು ಅನುಬಂಧದಲ್ಲಿರುವಂತೆ ಡಿಸೆಂಬರ್2010ರ ಅಂತ್ಯಕ್ಕೆ ರೂ.10987.66 ಲಕ್ಷಗಳ ವೆಚ್ಚವನ್ನು ಭರಿಸಲಾಗಿದ್ದು, ಜನವರಿ 2011 ರಿಂದ ಮಾರ್ಚ್ 2011ರ ಅಂತ್ಯಕ್ಕೆ ರೂ.4628.28ಲಕ್ಷಗಳ ವೆಚ್ಚ ಭರಿಸಲು ಉದ್ದೇಶಿಸಿದ್ದು ಒಟ್ಟಾರೆ ರೂ.15615.94 ಲಕ್ಷಗಳಿಗೆ ಅಂದಾಜನ್ನು ಪರಿಷ್ಕರಿಸಲಾಗಿದೆ.

ಮಾನ್ಯರೇ,

2010-11ನೇ ಸಾಲಿನ ಪರಿಷ್ಕೃತ ಆದಾಯ ಮತ್ತು ವೆಚ್ಚಕ್ಕೆ ಅನುಮೋದನೆಗಾಗಿ ಸಭೆಯ ಮುಂದೆ ಮಂಡಿಸಿದೆ.